ವಿಜಯವಾಣಿ
ಕನ್ನಡಿಗರ ಧ್ವನಿ

## Saturday 25th September 2021, Page No.03

## UPSC Exam Result announced: RVCE Yatish R 115 Rank, N Raghavendra 555 Rank

ವಿಜಯವಾಣಿ ನಂ.1

### ಯುಪಿಎಸ್ಸಿ ಪರೀಕ್ಷೆ ಫಲಿತಾಂಶ ಪ್ರಕಟ | ಅಕ್ಷಯ್ ರಾಜ್ಯದ ಟಾಪರ್

# ಕರ್ನಾಟಕಕ್ಕೆ 30 ರ್‍ಯಾಂಕ್

■ ವಿಜಯವಾಣಿ ಸುದ್ದಿಜಾಲ ಬೆಂಗಳೂರು

ಕೇಂದ್ರ ಲೋಕಸೇವಾ ಆಯೋಗದ (ಯುಪಿಎಸ್‌ಸಿ) 2020-21ನೇ ಸಾಲಿನ ಫಲಿತಾಂಶ ಪ್ರಕಟವಾಗಿದ್ದು, ರಾಜ್ಯದಿಂದ 30ಕ್ಕೂ ಅಧಿಕ ವಿದ್ಯಾರ್ಥಿಗಳು ಉತ್ತೀರ್ಣರಾಗಿರುವ ಮಾಹಿತಿ ಲಭಿಸಿದೆ. ಕನ್ನಡ ಸಾಹಿತ್ಯವನ್ನು ಐಚ್ಛಿಕ ಭಾಷೆಯಾಗಿ ತೆಗೆದುಕೊಂಡಿದ್ದ ಮಂಡ್ಯ ಮೂಲದ ಬೆಂಗಳೂರಿನ ನಿವಾಸಿ ಕೆ.ಜಿ. ಅಕ್ಷಯ್ ಸಿಂಹ 77ನೇ ಸ್ಥಾನ ಪಡೆದುಕೊಂಡಿದ್ದಾರೆ. ಆ ಮೂಲಕ ರಾಜ್ಯದಲ್ಲಿ ಪಾಸ್ ಆಗಿರುವ ಅಭ್ಯರ್ಥಿಗಳ ಪೈಕಿ ಮೊದಲ ಸ್ಥಾನ ಪಡೆದುಕೊಂಡಿದ್ದಾರೆ. ಕಳೆದ ವರ್ಷ ಕರ್ನಾಟಕದಿಂದ 27 ಅಭ್ಯರ್ಥಿಗಳು ರ್‍ಯಾಂಕ್ ಪಡೆದಿದ್ದರು. ಈ ಬಾರಿ ಆ ಸಂಖ್ಯೆ 30 ದಾಟಿದೆ. ಆದರೆ, ಕಳೆದ ಎರಡು ಮೂರು ವರ್ಷಗಳಿಗೆ ಹೋಲಿಸಿದರೆ ಪಾಸ್ ಆದ ಅಭ್ಯರ್ಥಿಗಳ ಸಂಖ್ಯೆ ಸ್ವಲ್ಪ ಕ್ಷೀಣಿಸಿದೆ. ರಾಜ್ಯದಿಂದ ಸುಮಾರು 20 ಸಾವಿರಕ್ಕೂ ಹೆಚ್ಚು ಅಭ್ಯರ್ಥಿಗಳು ಪ್ರಿಲಿಮ್ಸ್ ಪರೀಕ್ಷೆ ಎದುರಿಸಿದ್ದು, 100ಕ್ಕೂ ಹೆಚ್ಚು ಮಂದಿ ಮುಖ್ಯ ಪರೀಕ್ಷೆ ಉತ್ತೀರ್ಣರಾಗಿದ್ದರು. ಅವರಲ್ಲಿ 30 ಮಂದಿ ಭಾರತೀಯ ಆಡಳಿತ ಸೇವೆ (ಐಎಎಸ್), ಭಾರತೀಯ ಪೊಲೀಸ್ ಸೇವೆ (ಐಪಿಎಸ್), ಭಾರತೀಯ ವಿದೇಶಾಂಗ ಸೇವೆ (ಐಎಫ್‌ಎಸ್) ಸೇರಿದಂತೆ ವಿವಿಧ ಸೇವೆಗಳಿಗೆ ಆಯ್ಕೆಯಾಗಿದ್ದಾರೆ. ಮುಖ್ಯ ಪರೀಕ್ಷೆ ಜನವರಿಯಲ್ಲಿ ನಡೆದರೆ, ಸಂದರ್ಶನ ಆಗಸ್ಟ್- ಸೆಪ್ಟೆಂಬರ್ ತಿಂಗಳಲ್ಲಿ ನಡೆದಿತ್ತು.

**ಕರ್ನಾಟಕದವರಿವರು:** ಕೆ.ಜಿ. ಅಕ್ಷಯ್ ಸಿಂಹ - 77, ಆರ್.ಯತೀಶ್- 115, ಎಂ. ನಿಶ್ಚಯ್ ಪ್ರಸಾದ್- 130, ಸಿರಿವೆನ್ನೆಲ-204, ಅನಿರುದ್ಧ್ ಆರ್. ಗಂಗಾವರಂ- 252, ಸೂರಜ್.ಡಿ -255, ನೇತ್ರಾ ಮೇಟಿ-326, ಮೇಘಾ ಜೈನ್-354, ಪ್ರಜ್ವಲ್- 367, ಸಾಗರ್ ಎ.ವಾಡಿ- 385, ಜಿ.ಎಸ್. ಅರ್ಜುನ್- 452, ನಾಗರಗೋಜಿ ಶುಭಂ - 453, ಬಿಂದುಮಣಿ.ಆರ್.ಎನ್ -468, ಎಂ.ವಿ.ಮಾಲಾಶ್ರೀ- 504, ಎನ್.ರಾಘವೇಂದ್ರ- 555, ಶಕೀರ್ ಅಹ್ಮದ್ ತೊಂಡಿಖಾನ್ -583, ಪ್ರಮೋದ್ ಆರಾಧ್ಯ ಎಚ್.ಆರ್ -601, ಕೆ. ಸೌರಬ್ - 725, ಪಿ.ಎಸ್. ಸಂದೀಪ್ ಕುಮಾರ್- 741, ವೈಶಾಖ್ ಬಗೀ- 744, ಸಂತೋಷ್ ಎಚ್ -751, ಎಚ್.ವಿ.ಅಮೃತ್- 752,

ಪುಟ 8



ಕಳೆದ ಮೂರು ವರ್ಷಗಳಿಂದ ಅಧ್ಯಯನ ಮಾಡುತ್ತಿದ್ದೇನೆ. ಕಳೆದ ಸಾಲಿನಲ್ಲಿ ಆಯ್ಕೆಯಾಗಿರಲಿಲ್ಲ. ಪ್ರಸಕ್ತ ಅವಧಿಯಲ್ಲಿ ಕನ್ನಡ ಸಾಹಿತ್ಯವನ್ನು ಐಚ್ಛಿಕ ವಿಷಯವನ್ನಾಗಿ ಆಯ್ಕೆ ಮಾಡಿಕೊಂಡಿದ್ದೆ. ಡಾ.ಕೆ. ಸತ್ಯನಾರಾಯಣ್ ನಮ್ಮ ದೊಡ್ಡಪ್ಪ. ಅವರಿಂದ ಸ್ಫೂರ್ತಿ ಪಡೆದು ನಾನು ವ್ಯಾಸಂಗ ಮಾಡಿದೆ. ಇನ್‌ಸೈಟ್ಸ್ ವಿನಯ್‌ಕುಮಾರ್ ಮಾರ್ಗದರ್ಶನದಲ್ಲಿ ಸಾಕಷ್ಟು ಅಣಕು ಸಂದರ್ಶನ ಎದುರಿಸಿದೆ. 77ನೇ ರ್‍ಯಾಂಕ್ ಬಂದಿದೆ. ಐಎಎಸ್ ಹುದ್ದೆ ಸಿಗುವ ಭರವಸೆ ಇದೆ.

| **ಕೆ.ಜಿ. ಅಕ್ಷಯ್ ಸಿಂಹ** 77ನೇ ರ್‍ಯಾಂಕ್

### ಶುಭಂ ಕುಮಾರ್ ದೇಶಕ್ಕೆ ಟಾಪ್

ಈ ಬಾರಿ ಯುಪಿಎಸ್‌ಸಿಯಲ್ಲಿ ಐಐಟಿ ಮುಂಬೈನಲ್ಲಿ ಬಿ ಟೆಕ್ ಪದವಿ ಪಡೆದಿರುವ ಬಿಹಾರದ ಶುಭಂ ಕುಮಾರ್ ದೇಶಕ್ಕೆ ಮೊದಲ ರ್‍ಯಾಂಕ್



ಪಡೆದಿದ್ದಾರೆ. ಜಾಗೃತಿ ಅವಸ್ಥಿ ಮತ್ತು ಅಂಕಿತಾ ಜೈನ್ ಕ್ರಮವಾಗಿ ಎರಡು ಮತ್ತು ಮೂರನೇ ರ್‍ಯಾಂಕ್ ಗಳಿಸಿದ್ದಾರೆ. ಎರಡು ವರ್ಷ ಕೆಳಗೆ ಯುಪಿಎಸ್‌ಸಿ ಟಾಪರ್ ಆಗಿದ್ದ ಟೀನಾ ಡಾಬಿ ತಂಗಿ ರಿಯಾ ಡಾಬಿ ಈ ಬಾರಿ 15ನೇ ರ್‍ಯಾಂಕ್ ಗಳಿಸಿರುವುದು ವಿಶೇಷ. ಮೊದಲ 25 ಸ್ಥಾನದಲ್ಲಿರುವವರ ಪೈಕಿ 13 ಪುರುಷರು ಮತ್ತು 12 ಮಹಿಳೆಯರು ಇದ್ದಾರೆ. ಒಟ್ಟಾರೆ 761 ಅಭ್ಯರ್ಥಿಗಳನ್ನು ನಾಗರಿಕ ಸೇವೆಯ ಹುದ್ದೆಗಳಿಗೆ ನೇಮಕಾತಿ ಮಾಡಲು ಯುಪಿಎಸ್‌ಸಿ ಶಿಫಾರಸು ಮಾಡಿದೆ. ಇದರಲ್ಲಿ 263 ಸಾಮಾನ್ಯ ವರ್ಗ, 86 ಇಡಬ್ಲ್ಯುಎಸ್, 229 ಒಬಿಸಿ, 122 ಎಸ್‌ಸಿ, 61 ಎಸ್‌ಟಿ ವರ್ಗಕ್ಕೆ ಸೇರಿದವರಾಗಿದ್ದಾರೆ.

ವಿಜಯವಾಣಿ ನಂ 1

# ಕರ್ನಾಟಕಕ್ಕೆ 30 ರ‍್ಯಾಂಕ್

ಮೊದಲನೇ ಪುಟದಿಂದ...



ಆರ್‌ವಿ ಕಾಲೇಜಿನಲ್ಲಿ ಎಲೆಕ್ಟ್ರಾನಿಕ್ಸ್ ಆಂಡ್ ಕಮ್ಯೂನಿಕೇಷನ್ಸ್ ಪದವಿ ಮುಗಿಸಿದೆ. ಅನಂತರ ನಾನು ಎಲ್ಲೂ ಕೆಲಸಕ್ಕೆ ಹೋಗಲಿಲ್ಲ. ವ್ಯಾಸಂಗ ಆರಂಭಿಸಿದೆ. ಮೂರು ವರ್ಷಗಳ ಕಾಲ ಸತತ ಪ್ರಯತ್ನದ ಫಲವಾಗಿ ಇಂದು ಯುಪಿಎಸ್ ಸಿಯಲ್ಲಿ 115ನೇ ರ‍್ಯಾಂಕ್ ಸಿಕ್ಕಿದೆ. 2019ರಲ್ಲಿ ಐಪಿಎಸ್ ಸಿಕ್ಕಿತ್ತು. ಆದರೆ ಐಎಎಸ್ ಆಗಬೇಕೆಂಬ ಕನಸಿನೊಂದಿಗೆ ಒಂದು ವರ್ಷ ಡೆಲ್ಲಿಯಲ್ಲಿ ವಾಜಿರಾಂ ಆ್ಯಂಡ್ ರವಿ ಅವರ ಬಳಿ ತರಬೇತಿ ಪಡೆದೆ. ನಂತರ ಚಂದ್ರಾ ಲೇಔಟ್‌ನ ಇನ್‌ಸೈಟ್ ಅಕಾಡೆಮಿಯಲ್ಲಿ ತರಬೇತಿ ಪಡೆದೆ. ಸ್ಪರ್ಧಾತ್ಮಕ ಪರೀಕ್ಷೆ ಬರೆಯಬೇಕೆಂದರೆ ನಮ್ಮನ್ನು ನಾವು ಸಂಪೂರ್ಣವಾಗಿ ತೊಡಗಿಸಿಕೊಳ್ಳಬೇಕು. ಜತೆಗೆ ಪ್ಲಾನ್ ಮಾಡಿಕೊಂಡು ದೀರ್ಘ ಅಧ್ಯಯನವೂ ಜತೆಯಾಗಿರಬೇಕು. ಆಗ ಮಾತ್ರ ಯಶಸ್ಸು ಸಾಧ್ಯ.

**| ಆರ್. ಯತೀಶ್** 115ನೇ ರ‍್ಯಾಂಕ್



**2019**ರಲ್ಲಿ ಬಿ.ಇ ಮುಗಿಸಿ ಅಂದಿನಿಂದ ಯುಪಿಎಸ್‌ಸಿ ವ್ಯಾಸಂಗ ಆರಂಭಿಸಿದೆ. ಐಎಎಸ್ ಆಗಬೇಕು ಎಂಬುದು ಕನಸಾಗಿತ್ತು. ಕಳೆದ ಮೂರು ವರ್ಷಗಳಿಂದ ಸ್ವಯಂ ಅಧ್ಯಯನ ಮಾಡುತ್ತಿದ್ದೆ. ಐಎಎಸ್, ಐಪಿಎಸ್ ಮತ್ತು ಐಎಫ್‌ಎಸ್ ಸೇವೆಯಲ್ಲಿ ಯಾವುದು ಸಿಕ್ಕರೂ ಸೇವೆಗೆ ಹಾಜರಾಗುತ್ತೇನೆ. ಐಎಎಸ್ ಓದಬೇಕಾದರೆ ಯಾವುದೇ ತರಬೇತಿ ಅಗತ್ಯವಿಲ್ಲ. ಶ್ರದ್ಧೆ, ಕಠಿಣ ಪರಿಶ್ರಮದಿಂದ ಓದಿದರೆ ಗುರಿ ತಲುಪಬಹುದಾಗಿದೆ. ಸಾಮಾನ್ಯ ಪದವಿ ಮಾಡಿರುವವರು ಪ್ರಯತ್ನ ಮಾಡಬಹುದಾಗಿದೆ.

**| ಎಂ. ನಿಶ್ಚಯ್ ಪ್ರಸಾದ್** 130ನೇ ರ‍್ಯಾಂಕ್, ಮೈಸೂರು

Bengaluru Edition
Sep 25, 2021 Page No. 14
Powered by : eReleGo.com